siri-kannada.in

# (೧೯) ವೃಷಭಸೇನರೆಂಬ ರಿಸಿಯರ ಕಥೆ

ವೃಷಭಸೇನರೆಂಬ ರಿಸಿಯರ ಕಥೆಯಂ ಪೇೞ್ವೆಂ:

ಗಾಹೆ || ವಸಈಏ ಪಳಿದಾಏ ವಿಟ್ಠಾಮಚ್ಚೇಣ ಉಸಹಸೇಣೋವಿ |
ಆರಾಧಣಂ ಪವಣ್ಣೋ ಸಂಘ ಪರಿಸಾಏ ಕುಣಾಳಹ್ಮಿ ||

[ವಸಈಏ—ಬಸದಿ, ಪಳಾದಿಏ, —ಉ[1]ರಿ[1]ಪೆಪಟ್ಟುದಾದೊಡೆ, ವಿಟ್ಠಾಮಚ್ಚೇಣ—ವಿಷ್ಟಮ[2]ತ್ಸ್ಯ[2]ನಿಂದಂ, ಉಸಹಸೇಣೋವಿ—ವೃಷಭಸೇನಾಚಾರ್ಯರ್, ಆರಾಧಣಂ—[3]ಮಿಕ್ಕ[3] ದರ್ಶನಜ್ಞಾನಚಾರಿತ್ರಂಗಳಾರಾಧನೆಯಂ, ಪವಣ್ಣೋ—ಪೊ[4]ರ್ದಿ[4]ದೊಂ, ಸಂಘ ಪರಿಸಾಏ—ತಮ್ಮ ರಿಸಿಸಮುದಾಯಂಬೆರಸು, ಕುಣಾಳಹ್ಮಿ—ಕುಣಾಳಮೆಂಬ ಪೊೞಲೊಳ್]

ಅದೆಂತೆಂದೊಡೆ:

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ದಕ್ಷಿಣಾ ಪಥದೊಳ್ ಕರ[5]ಹಟ[5]ಮೆಂಬುದು ನಾಡಲ್ಲಿ ಕುಣಾಳಮೆಂಬ ಪೊೞಲದನಾಳ್ವೊಂ ಧನದನೆಂಬೊನರಸನಾತನ ಮಹಾದೇವಿ ಪದ್ಮಶ್ರೀಯೆಂಬೊಳ್ ಮಂತ್ರಿ ವಿಷ್ಟಮತ್ಸ್ಯನೆಂಬೊಂ[6] ಪಿರಿಯ ಪಂಡಿತನಂತವರ್ಗಳಿಷ್ಟವಿಷಯಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ

ಮತ್ತೊಂದು ದಿವಸಂ ವೃಷಭಸೇನರೆಂಬಾಚಾರ್ಯರ್ ಪಿರಿದು ರಿಸಿಸಮುದಾಯಂಬೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತ[7]ಮಾ[7] ಪೊೞ[8]ಲ್ಗೆ[8] ಬಂದೊಂದು [9]ಬಸದಿಯೊ[9]ಳಿರ್ದರವರ ಬರವನರಸನುಂ ಪೊೞಲ*ವರುಂ ಕೇಳ್ದು ಪಿರಿದುಂ ಪೂಜೆಯಂ ಕೊಂಡುಪೋಗಿಯರ್ಚಿಸಿ ಪೂಜಿಸಿ ಪೊಡೆವಡುವುದಂ ವಿಷ್ಟಮತ್ಸ್ಯಂ ಕಂಡು ಸೈರಿಸಲಾಱದೆ ಮಾತ್ಸರ್ಯದಿಂದಂ ತನ್ನ ಪಾಂಡಿತ್ಯದ ಗರ್ವದಿಂದಂ ವೃಷಭಸೇನಾಚಾರ್ಯರೊಡನೆ ವಾದುಗೆಯ್ದು ನೆರವಿಯೊಳ್ ಸೋಲ್ತುಸಿಗ್ಗಾಗಿ ಪೋಗಿ ನಟ್ಟನಡುವಿರುಳ್ ಬಂದು* ಕಿಚ್ಚಂ ತಗುಳ್ಚಿ ಪೋದಂ ಮತ್ತಂ ವೃಷಭಸೇನಾಚಾರ್ಯರ್ ಮೊದಲಾಗೊಡೆಯ ರಿಸಿಯರ್ಕಳ್ [10]ಕ್ಷಮೆಯಂ ಭಾವಿಸಿ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಯಾವಜ್ಜೀವಂ ನಿವೃತ್ತಿಗೆಯ್ದು ಶುಭಪರಿಣಾಮದಿಂದ[10]ಂಮಿಕ್ಕ ರತ್ನತ್ರಯಂಗಳಂ ಸಾಧಿಸಿ[11] ಮುಡಿಪಿಯಲ್ಲಿ ವೃಷಭಸೇನಾ

---

1. ರು (ಕಗ). 2. ತ್ಸರನೆಂಬೊ (ಘ). 3. ಸಮ್ಯಗ್ (ಘ). 4. ಳ್ದಿ (ಕಖಗ). 5. ಹಡ (ಖ), ಹಾಟ (ಘ). 6.+ಪಿರಿ (ಖ). 7. ಮಂತಾ (ಘ). 8. ಲೊಳಗೆ (ಘ). 9. ಪುರದೊ (ಕ). ಮರದೊ(ಖಗ), 'ಮಠದೊ' ಎಂದಿರಬಹುದೆ? *-* (ಘ)ದಲ್ಲಿ ತ್ರುಟಿತ. 10. +ಸಮ್ಯಗ್‌ದರ್ಶನ ಚಾರಿತ್ರಂಗಳಂ ಸಾಧಿಸಿ (ಘ). 11. (ಘ)ದಲ್ಲಿಲ್ಲ.

ಚಾರ್ಯರ್ ಪದಿನಾಲ್ಕನೆಯ ಪ್ರಾಣತಮೆಂಬ ಕಲ್ಪದೊಳ್ ಪು[1]ಷ್ಪ[1]ಕಮೆಂಬ ವಿಮಾನದೊಳಿರ್ಪ[2]ತ್ತು[2] ಸಾಗರೋಪಮಾಯುಷ್ಯಮನೊಡೆಯ ದೇವನಾಗಿ ಪುಟ್ಟಿ[3]ದರ್[3] ಮತ್ತುೞಿದ ಋಷಿಯರ್ಕಳುಂ [4]ತಂತಮ್ಮ ತಪೋನುಷ್ಠಾನಕ್ಕೆ ತಕ್ಕಂತು[4] ಸೌಧರ್ಮ ಕಲ್ಪಂ ಮೊದಲಾಗೊಡೆಯ ಸ್ವರ್ಗಂಗಗೊಳ್ ಪುಟ್ಟಿದರ್

ಮ[5]ತ್ತಂ[5]ಪೆಱರುಂ[6]ಸಂನ್ಯಸನಂಗೆಯ್ದಿರ್ದ ಕ್ಷಪ[7]ಣಕರುಂ[7] ವೃಷಭಸೇನಾಚಾರ್ಯರ್ ಮೊದಲಾಗೊಡೆಯ ರಿಸಿಯರ್ಕಳಂ ಮನ[8]ದ[8] ಬಗೆದು ಚತುರ್ವಿಧಮಪ್ಪ ಸರ್ಗಮುಮಂ ವಸಿವುಂ ನೀರೞ್ಕೆ ಮೊದಲಾಗೊಡೆಯ ಪರೀಷಹಂಗಳಂ [9]ವ್ಯಾದಿಗಳೊಳಪ್ಪ ವೇದನೆಗಳುಮಂ[9] ಸೈರಿಸಿ ಕ್ಷಮೆಯಂ ಭಾವಿಸಿ ಶುಭ ಪರಿಣಾಮದಿಂ[10]ದಂ[10] ಪರಮ ಶುದ್ಧ ಸಹಜ ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ † ಸುಖಂಗಳನೆಯ್ದುಗೆ*

**ಈ ಪೇೞ್ದ ಪತ್ತೊಂ[11][ಬ][11]ತ್ತು ಕಥೆ[12]ಗ [ಳಂ][12]**
**[13]ಶಿವ[13]ಕೋಟ್ಯಾಚಾರ್ಯ[14]ರ್ ಪೇೞ್ದೊ [ರ್] [14]**
**[15]ವಡ್ಡಾರಾಧನೆ ಸಂಪೂರ್ಣ[15] † †**

---

1. (ಕಘ). ರ್ಪ (ಗ). 2. ತ್ತೆರಡು (ಘ). 3. ದಂ (ಘ). 5. ಸಮ್ಯಗ್‌ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿಮರಣದಿಂ ಮುಡಿಪಿ (ಘ). 5. ತ್ತೆ (ಘ). 6. +ಸಮ್ಯಗ್ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ (ಘ). 7. ಕರುಂ (ಖ), ಕರ್ (ಘ). 8. ಡೊಳು (ಕಗಘ). 9. (ಘ)ದಲ್ಲಿ ಇಲ್ಲ. 10. ಮುಡಿಪಿ (ಘ). † +ದ (ಘ). 12. ಭ (ಕಖಗಘ). 12. ಗ+ (ಕ), ಗಳ್ (ಖ), ಗಳು (ಗ), ಯಂ (ಘ). 13. (ಕ)ದಲ್ಲಿ ತ್ರುಟಿತ, ರೇವಾ (ಘ). 14. ರು ಪೇಳ್ದಾ (ಗ), ರ್ ಪೇಳ್ದ (ಖ), ರ್ಪ್ಪೇಳ್ದ (ಘ). 15. ವೊಡ್ಡಾರಾದಣಂ ಸಂಪೂರ್ಣಂ (ಕಗ), ವಡ್ಡಾರಾಧನೆಯ ಕವಚವು (ಖ), ವಡ್ಡಾರಾಧನೆಯ ಕವಚವೆಂಬದಿಕಾರಉ (ಘ).

*ಈ ಕಥೆ ಮುಗಿದ ಮೇಲೆ (ಘ)ದಲ್ಲಿ ಈ ಕೆಳಗಿನ ಗಾಹೆಗಳಿವೆ:

ಜಾಗೆ|| ಜದಿತಾ ಏವಂ ಏದೇ ಅವಗಾರಾ ತಿಬ್ಬ ವೇದಣ ವೋ ಪಿ|
ಏಕಾರಿಯ ಪಡಿಕಮ್ಮಾ ಪಡಿವಣ್ಣೋ ಉತ್ತಮಂ ಅಟ್ಠಂ||
ಕಿಂಪುಣ ಅಣಗಾರ ಸಹಾಯ ಗೇಣ ಕಿರದರ ಗಹಿ ಪಡಿಕಮ್ಮೇ|
ಸಂಘೇಓ ಅಂಗತು ಅಂಗತು ಆರಾಧವೇ ದುಣ್ಣ ಸಕ್ಕಂಚಿ||
ಜಿಣವಯಣ ಮರುದ ಭೂದಂದು ತಚ್ಛಣ್ಣಾಹುದಿಂ ಸುಣು|
ತೇಣ ಸಖ್ಬಿಸಪ...ಮಯ್ಛ್ಬೀ ಸೋದೇದುಂ ಉತ್ತಮಂ ಅಟ್ಠಂ||

(††) ಇದಾದಮೇಲೆ (ಘ)ದಲ್ಲಿ ಈ ಕೆಳಗಿನ ಕಂದಪದ್ಯವಿದೆ:

ಆವಾವ ಜನ್ಮಜನ್ಮದೊ
ಳಾವಾವ ಕುಲಾಕುಲಂಗಳೊಳ್ ಪುಟ್ಟುವಡಂ
ದೇವರರುಹಂತರೇಂಬೀ
ಭಾವನೆ ಸಮನಿಸುಗು ಜನ್ಮಜನ್ಮಾಂತರದೊಳ್